ಎದುರು, ಇನ್ನೊಂದು ಬಟ್ಟಲಲ್ಲಿ ಸಂತೋಷನ ಮುಂದಿಟ್ಟರು. ಒಂದು ಚರಿಗೆಯ ತುಂಬ ಬೆಲ್ಲದ ಕಷಾಯ ತಂದು ಎದುರಿಟ್ಟವರು, 'ಈಗ ಎಷ್ಟು ಹೊಟ್ಟೆಗೆ ಹಾಕ್ಕೋತಿರೋ, ಅಷ್ಟೇ. ಇನ್ನು ಹೊಟ್ಟೆಗೆ ಸಿಕ್ಕೋದು ನಾಲ್ಕಾರು ದಿನವಾದೀತು' ಎಂದವರು ಸಂತೋಷನತ್ತ ತಿರುಗಿ, 'ಆ ಹುಡುಗನನ್ನ ಎಬ್ಬಿಸಿ, ನೀವೆಲ್ಲ ಇನ್ನೊಂದು ಘಳಿಗೆಯಲ್ಲಿ ಇಲ್ಲಿಂದ ಹೊರಡಬೇಕು. ಇಲ್ಲವಾದರೆ ಅನರ್ಥವಾಗುತ್ತೆ' ಎಂದರು. ನಿದ್ದೆಯಲ್ಲಿದ್ದ ಮನೀಷನನ್ನು ಎಬ್ಬಿಸಿ, ಮುಖ ತೊಳೆಸಿ, ಒಂದಿಷ್ಟು ಅವಲಕ್ಕಿ ಮುಕ್ಕಿ ತಮ್ಮ ಸರಂಜಾಮನ್ನು ಒಟ್ಟು ಮಾಡುವಷ್ಟರಲ್ಲಿ ಸಂತೋಷನಿಗೆ ಆ ಥಂಡಿಯಲ್ಲೂ ಮೈಯಲ್ಲಿ ಬೆವರು ಬಂದಿತ್ತು.

ಅಷ್ಟರಲ್ಲಿ ಗುಡ್ಡದ ಕೆಳಗಡೆಯಿಂದ ಕೂಗು ಕೇಳಿಬಂತು. ನಸುಕಿನ ಮಬ್ಬುಗತ್ತಲೆಯಲ್ಲಿ ಎಲ್ಲರೂ ಅತ್ತ ನೋಡುತ್ತಿರುವಂತೆಯೇ ಒಂದಷ್ಟು ಮಂದಿ ಮೇಲಕ್ಕೆ ಹತ್ತಿ ಬಂದರು. ಅವರ ಮುಖಗಳಲ್ಲಿನ ಪ್ರೇತಕಳೆ ಆ ಅರೆಗತ್ತಲಲ್ಲೂ ನಿಚ್ಚಳವಾಗಿ ತೋರುತ್ತಿತ್ತು. ಭಯಗ್ರಸ್ತರಾಗಿದ್ದ ಅವರೆಲ್ಲ ನಡುಗುತ್ತಿದ್ದರು. ಅವರಲ್ಲೊಬ್ಬ ಕುಗ್ಗಿದ ಸ್ವರದಲ್ಲಿ, 'ನಮ್ಮ ಕಡೆ ಆದ ಅನಾಹುತ ಹೇಳಿತೀರೋದಲ್ಲ, ಗುಡ್ಡಕ್ಕೆ ಗುಡ್ಡವೇ ಕುಸಿದಿದೆ. ತೋಟ, ಮನೆ ಎಲ್ಲ ಮಣ್ಣಿನಡಿಗೆ ಆಗಿವೆ. ಯಾರ್‍ಯಾರು ಮಣ್ಣಡಿಗೆ ಆದರೋ ಗೊತ್ತಿಲ್ಲ, ಬದುಕಿದ್ದವರು ಹೇಗೋ ಬಂದಿದ್ದೇವೆ. ಇನ್ನಷ್ಟು ಮಂದಿ ಕೆಳಗೆ ಇದ್ದಾರೆ. ಬೆಂಕಿ ಬೆಳಕು ಕಂಡು ಇಲ್ಲಿಗೆ ಬಂದೆವು' ಎಂದ.

ಸಂತೋಷನತ್ತ ಅರ್ಥಗರ್ಭಿತವಾಗಿ ದೃಷ್ಟಿಬೀರಿದ ಮೂರ್ತಿರಾಯರು ಅವರಲ್ಲೇ ಒಬ್ಬನನ್ನು ಮಡೂರನ ಜೊತೆ ಕಳುಹಿಸಿ ಉಳಿದವರನ್ನು ಕರೆಕೊಂಡು ಬರುವಂತೆ ಸೂಚಿಸಿದರು. ಮಳೆ ಸಣ್ಣದಾಗಿ ಹನಿಯುತ್ತಿತ್ತು. ಆ ಅಸ್ಪಷ್ಟ ನಸುಕಿನಲ್ಲಿ ಸುತ್ತಲಿನ ಗುಡ್ಡಗಳು ಜರುಗಿ, ಕುಸಿದಿರುವುದು ಗೋಚರಿಸುತ್ತಿತ್ತು.

'ನನ್ನಲ್ಲಿದ್ದುದನ್ನ ಹಂಚಿಕೊಂಡು ತಿನ್ನುವಾ. ಮಂದಿನ ಸ್ಥಿತಿ ಇನ್ನೂ ಕಠಿಣವಿದೆ. ಸುರಕ್ಷಿತ ಜಾಗಕ್ಕೆ ತಲುಪಿಕೊಳ್ಳಬೇಕು. ದಾರಿಯುಂಟೋ, ಇಲ್ಲವೋ? ದಾರಿಯನ್ನು ಮಾಡಿಕೊಂಡಾದರೂ ಹೋಗಬೇಕು' ಎನ್ನುತ್ತಲೇ ಚುರುಕಾಗಿ ಮನೆಯಲ್ಲಿದ್ದ ತಿನ್ನಬಹುದಾದ ಪದಾರ್ಥಗಳನ್ನು ಬಂದವರಿಗೆ ಹಂಚಿದರು. 'ತಡ ಮಾಡಿದಷ್ಟೂ ಅನರ್ಥ ಎದುರಾಗಬಹುದು. ಬೇಗ ಹೊರಡಿ' ಎಂದವರು ಮನೆ ಬಾಗಿಲು ಎಳೆದು ಚಿಲಕವನ್ನೂ ಹಾಕದೇ ಮುಂದಾಗಿ ನಡೆದರು. ಅವರ ಹಿಂದೆ ಸಂತೋಷ, ಮನೀಷ, ಮಡೂರನ ಪರಿವಾರ, ಗುಡ್ಡ ಕುಸಿತದಿಂದ ಬಚಾವಾಗಿ ಬಂದವರು ಸೇರಿದಂತೆ ಸಾಕಷ್ಟು ಜನರಿದ್ದರು.

ಒಂದೆಡೆ ನಿಂತು ಹೋಗುವ ದಾರಿಯನ್ನು ಮಡೂರನಿಗೆ ವಿವರಿಸಿ, 'ನೀವು ಮುಂದೆ ಹೋಗಿ, ಏನೋ ಮರೆತು ಬಂದೆ. ದೇವನಳ್ಳಿಯಲ್ಲಿ ಸಿಗೋಣ' ಎಂದ ಮೂರ್ತಿರಾಯರು ಸಂತೋಷನ ಬಳಿ ಬಂದವರು, 'ನಾನು ನಿಮ್ಮ ಜೊತೆ ಬರೋದಿಲ್ಲ, ಮಡೂರನಿಗೆ ಎಲ್ಲ ಹೇಳಿದ್ದೇನೆ. ಈ ಸಂಕಷ್ಟ ಸ್ವಲ್ಪದರಲ್ಲೇ ಕಳೆಯುತ್ತದೆ. ಮತ್ತೆ ಬನ್ನಿ. ನಿಮ್ಮ ಖರ್ಚಿಗೆ ಇದು' ಎಂದವರು ಒಂದು ಲಕೋಟೆಯನ್ನು ಅವನ ಕೈಯಲ್ಲಿಟ್ಟು ತಿರುಗಿ ನೋಡದೇ ಹಿಂದೆ ನಡೆದುಬಿಟ್ಟರು.


## ಗಂಗಾಧರ ಕೊಳಗಿ

ಕೃಷಿಕ, ಬರಹಗಾರ, ಪತ್ರಕರ್ತ. ಎರಡು ಕಾದಂಬರಿ, ಒಂದು ಕಥಾಸಂಕಲನ, ಪ್ರವಾಸ ಕಥನ, ಪರಿಸರದ ಕುರಿತ ಪ್ರಬಂಧ ಸಂಕಲನ ಮುಂತಾಗಿ ಈ ವರೆಗೆ ಇವರ ಆರು ಕೃತಿಗಳು ಪ್ರಕಟವಾಗಿವೆ. ಪ್ರಸ್ತುತ ಸಿದ್ಧಾಪುರದಲ್ಲಿ ನೆಲೆಸಿದ್ದಾರೆ.